
ಮನೆಯಲ್ಲಿ ಮುಖ ತೊಳೆಯುತ್ತಿದ್ದ. ತಾನು ಇಷ್ಟು ಬೇಗ ನಿರೀಕ್ಷಿಸದೇ ಇದ್ದವನು ಬಂದುಬಿಟ್ಟಿದ್ದನೆಂದರೆ, ಅವನು ಸಲೀಸು ಬರಬಹುದಾದ ಅವನ ಮನೆಗೇ ಬಂದಿದ್ದರೂ ಒಂದಷ್ಟು ಅಸಂತೋಷವಾಯಿತವಳಿಗೆ. ಚೌಕದಿಂದ ಮುಖ ಒರೆಸುತ್ತಾ, "ಕಾಫಿಗಿಡು, ಇಲ್ಲಿ ವಿಪರೀತ ಮಳೆ ಅಂತ ಸೇತುವೆ ಮುರಿದೋಯ್ತು ಅಂತ ನ್ಯೂಸಲ್ಲಿ ನೋಡ್ದೆ. ನರಸೀಪುರದ ಸೇತುವೆ ದಾಟಿ, ಬಾಗ್ವಾಳು, ಜಾಂದಾಳ್ ಕ್ರಾಸಿನ ಮೇಲೆ ಬಂದೆ. ಏನೋ ಎಂತೋ ಅಂತ ಭಯವಾಗಿ ಟ್ಯಾಕ್ಸಿ ಮಾಡ್ಕಂಡೆ ಬಂದ್ಬಿಟ್ಟೆ. ಹೇಮಾವತಿ ನದಿ ಸೇತುವೆ ದಾಟೋವಾಗ ಎದೆ ಜಗ್ಗಂತು. ಯಾಪಾಟಿ ನೀರು, ಭಯವೇ ಆಯ್ತು ಕಣೆ" ಎನ್ನುತ್ತಿದ್ದವನಿಗೆ ಕಾಫಿ ಹವಣಿಸಲು ಅಡುಗೆ ಕೋಣೆಗೆ ಹೋದಳು. ಅಷ್ಟರಲ್ಲಾಗಲೇ ಪದ್ಮಕ್ಕ ಕಾಫಿಗೆ ನೀರಿಟ್ಟಿದ್ದಳು. ಸಂಕೋಚದಿಂದ ಮುದುರಿಕೊಂಡಿದ್ದವಳನ್ನು, "ಏನೂ ನಾಚ್ಕೋಬೇಡ ಪದ್ಮಕ್ಕ, ಅವರೇನು ನೀ ಕಾಣದವರಾ" ಎಂದು ಸಮಾಧಾನಿಸಿದಳು. ಕಾಫಿ ಲೋಟ ಕೈಗೆ ಕೊಡೋವಾಗ ಕೇಳಿದಳು: "ಅದೇನು, ಟ್ಯಾಕ್ಸಿ ಕಳಿಸಿಲ್ಲಾ ಇನ್ನೂ" ಎಂದು. "ನಿಜ, ಆ ಡ್ರೈವರ್ಗೂ ಕಾಫಿ ಕೊಡು. ನಾನೀಗ ಸ್ನಾನ ಮಾಡಿಕೊಂಡು ಹೊರಡಬೇಕು. ಕಳೆದ ವಾರ ಕಾಯಿ ಮಾರಿದ್ದು ದುಡ್ಡೆಷ್ಟಾಯ್ತು? ತಂದು ಕೊಡು. ದುಡ್ಡು ತೊಗೊಂಡೋಗೋಣ ಅಂತ ಬಂದೆ" ಎಂದ. ಬಂದ ನಿಜ ಕಾರಣ ಅನಾಯಾಸವಾಗಿ ಹೊರಬಂತು. "ಅದು... ಈ ಸಲದ್ದೆಲ್ಲ ಶೆಟ್ರಂಗಡೀಗೆ, ಗೊಬ್ಬರದಂಗಡೀಗೆ..." ಅನ್ನುವಷ್ಟರಲ್ಲಿ ಮಾತು ಹರಿತವಾಗಿ, "ಅವೆಲ್ಲ ಉಸಾಬರಿ ನಿಂಗ್ಬೇಡ, ದುಡ್ಡು ತಂದ್ಕೊಡು ಅಷ್ಟೇ" ಎಂದ ಧುಮುಗುಟ್ಟುತ್ತಾ. ಕೋಣೆಯೊಳಗಿನ ಕಬ್ಬಿಣದ ಕಪಾಟಿನಲ್ಲಿರಿಸಿದ್ದ ಹಣವನ್ನು ತಂದು ಅವನೆದುರಿನ ಊಟದ ಟೇಬಲ್ಲಲ್ಲಿ ಕುಕ್ಕಿದಾಗ, "ಏನೂ ದುಡ್ಡು ನಿಮ್ಮಪ್ಪನ ಮನೆಯಿಂದ ತಂದ್ಕೊಡ್ತೀಯಾ... ನಂದುಡ್ಡು" ಎಂದು ಅಂದಿದ್ದು ಹಜಾರದಲ್ಲಿದ್ದ ಪದ್ಮಳಿಗೂ ಕೇಳಿಸಿತು. ಕಾಫಿ ಕುಡಿದು ಸ್ನಾನಕ್ಕೆ ಟವೆಲು ಪಂಚೆ ಹಿಡಿದು ಹೋದಾಗ ಮೆಲ್ಲನೆ ಒಳಬಂದ ಪದ್ಮ, "ನಿಮ್ಮನೆ ಕತೆನೂ ಇದೇನಾ?" ಎಂದು ಮರುಕದಿಂದ ಕೇಳಿದಾಗ ಶಾರದೆ ಯಾವ ಉತ್ತರವನ್ನೂ ಕೊಡಲಿಲ್ಲ. ಒಂದಿಷ್ಟು ಖಿನ್ನತೆ ಆವರಿಸಿತವಳಿಗೆ. ಬರಬೇಕಾದವನು ಬಾರದೇ ಹೋದುದಕ್ಕೆ ಕಾರಣ ಹೊಳೆಯೂ ಅಲ್ಲ, ಮಳೆಯೂ ಅಲ್ಲ, ಸೇತುವೆಯಂತೂ ಅಲ್ಲವೇ ಅಲ್ಲ, ಎಂದು ಮೊದಲ ಬಾರಿಗೆ ಅನಿಸಿತವಳಿಗೆ. ಬರಲೇಬೇಕೆಂದವರು ಎಷ್ಟು ಬಳಸಾದರೂ ಬಂದೇ ಬರುತ್ತಾರೆ ಅಂತಲೂ ಅನಿಸಿತು. ತಮ್ಮ ನಡುವೆ ಇರುವ ಹೊಳೆಗಳನ್ನು ಹಾಯಲು ಒಂದಿಷ್ಟು ದಾಷ್ಟ್ರ್ಯ ಬೇಕು ಅಂತಲೂ ಅನಿಸಿತು. ತನಗಾಗಲೀ ಅವನಿಗಾಗಲೀ ಅಂತಹ ದಾಷ್ಟ್ರ್ಯ ಬಹುಶಃ ಇಲ್ಲವೇ ಇಲ್ಲ ಅಂತಲೂ ಅನಿಸಿಬಿಟ್ಟಿತು. ಇಲ್ಲ ತಾನ್ಯಾವತ್ತೂ ಈ ಹೊಳೆಯನ್ನು ದಾಟಲಾಗುವುದಿಲ್ಲ ಎಂಬ ಹತಾಶೆಯಲ್ಲಿ ಸುಳಿದ ನಿಟ್ಟುಸಿರು ಆ ಬೆಳಗಿನ ಚಳಿಯ ಶೈತ್ಯದೊಂದಿಗೆ ಬೆರೆತು ಹೋಯಿತು.

**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿರುವ ಗೃಹಿಣಿ. ಅವರ ಮೂರು ಕಾದಂಬರಿಗಳು, ಎರಡು ಕಥಾ ಸಂಕಲನಗಳು, ಕವನ ಸಂಕಲನಗಳು ಪ್ರಕಟವಾಗಿವೆ. 'ಮಯೂರ'ವೂ ಸೇರಿದಂತೆ ಕೆಲವು ಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿದ್ದಾರೆ. 'ಪಯಣರಾಗ' ಎಂಬ ಭಾವಗೀತೆಗಳ ಧ್ವನಿ ಸುರಳಿಯನ್ನು ಹೊರತಂದಿದ್ದಾರೆ. ಅವರ ನಾಟಕ – 'ಕದಳಿ ಕಲ್ಯಾಣ'.







# ಮಗಳಿ

**ಗೆಜ್ಜೆ** ಕಾಲಿಗೆ ಚುಚ್ಚು
ನಿನ್ನ ಗೆಜ್ಜೆ ತೆಗೆದೆ...
ಬಳೆ ಬ್ಯಾಗ್‌ಗೆ ಹಿಡಿಯ
ನಿನ್ನ ಬಳೆ ತೆಗೆದೆ...
ಸರ ಕುತ್ತಿಗೆಗೆ ಅಡಸು
ನಿನ್ನ ಸರ ತೆಗೆದೆ...
ಹಣೆಗೆ ಹುಗುಳಾಗುತಿ
ನಿನ್ನ ಕುಂಕುಮ ಅಳಿ
ಮೂಗು ತುರಿಸುತಿದೆ